5. ಉಪಾಧ್ಯಕ್ಷರ ತೀರ್ಪು :

ವಿಷಯ: ಪಕ್ಷೇತರ ಶಾಸಕರ ಅನರ್ಹತೆ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ.

ಉಪಾಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ದಿನಾಂಕ: 25.01.2012ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು 5 ಜನ ಪಕ್ಷೇತರ ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ನೀಡುರುವ ತೀರ್ಪನ್ನು ಅನುಸರಿಸಿ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 60ರ ಮೇರೆಗೆ ನಿಲುವಳಿ ಸೂಚನೆಯನ್ನು ನೀಡಿರುವುದು ಸರಿಯಷ್ಟೆ. ಆದರೆ, ಸದರಿ ತೀರ್ಮಾನವು ಭಾರತದ ಸಂವಿಧಾನದ 10ನೇ ಷೆಡ್ಯೂಲ್‌ನ ಅನುಸಾರ ಅಂದರೆ, ಪಕ್ಷಾಂತರ ಆಧಾರದ ಮೇಲೆ ಸದಸ್ಯರ ಅನರ್ಹತೆಯ ಮೇರೆಗೆ ಮಾನ್ಯ ಸಭಾಧ್ಯಕ್ಷರು ತೆಗೆದುಕೊಂಡ ತೀರ್ಮಾನವಾಗಿರುತ್ತದೆ. ಮಾನ್ಯ ಸಭಾಧ್ಯಕ್ಷರು ನ್ಯಾಯಿಕ ಸ್ವರೂಪದ ಕರ್ತವ್ಯವನ್ನು ನಿರ್ವಹಿಸಿ ತೀರ್ಮಾನವನ್ನು ನೀಡಿರುತ್ತಾರೆ. ಯಾವ ರೀತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ಪ್ರಶ್ನಿಸಲು ಸಾಧ್ಯವಿಲ್ಲವೋ ಅದೇ ರೀತಿ ಸಭಾಧ್ಯಕ್ಷರ ತೀರ್ಮಾನವನ್ನು ಪ್ರಶ್ನಿಸುವುದು ಸರಿಯಲ್ಲ. ಕೌಲ್ ಅಂಡ್ ಶಕ್ಧರ್ ಅವರ Practice and Procedure of Parliament ಪುಸ್ತಕದ ಪುಟ ಸಂಖ್ಯೆ: 126 ರಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ.

"The Speaker's decision is equally binding whether given in the House or on a departmental file is not bound to give reasons for his decisions. Members cannot criticize directly or indirectly, inside or outside the House any ruling given, opinion expressed or statement made by the Speaker."

ಅಲ್ಲದೆ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 62(iv) ರಲ್ಲಿ ಈ ರೀತಿ ತಿಳಿಸಿದೆ.

"62(iv) ನಿಲುವಳಿ ಸೂಚನೆಯು ಹಕ್ಕುಬಾಧ್ಯತೆಯನ್ನು ಪ್ರಶ್ನಿಸುವಂತಿರಕೂಡದು"

"62(viii) ಸಂವಿಧಾನದ ಮೇರೆಗೆ ಅಥವಾ ಈ ನಿಯಮಗಳ ಮೇರೆಗಿನ ಯಾವುದೇ ಪ್ರಶ್ನೆ ಎತ್ತುವಂಥ ನಿಲುವಳಿ ಸೂಚನೆ ಇರತಕ್ಕುದ್ದಲ್ಲ. ಕಾಯದರ್ಶಿಯವರಿಗೆ ಲಿಖಿತ ನೋಟಿಸ್ ಅನ್ನು ನೀಡುವುದರ ಮೂಲಕ ಮಾತ್ರವೇ ಅಂಥ ಪ್ರಶ್ನೆಗಳನ್ನು ಎತ್ತಬಹುದು".

ಮೇಲಿನ ಅವಕಾಶದಂತೆ ಮಾನ್ಯ ಸಭಾಧ್ಯಕ್ಷರ ವಿರುದ್ಧವಾಗಿ ಸಂಬಿಧಾನದ 179ನೆಯ ಅನುಚ್ಛೇಧದ (ಇ) ಖಂಡದ ಮೇರೆಗೆ ನಿರ್ಣಯ ಸಂಬಂಧವಾಗಿ ಸೂಚನೆಯನ್ನು ನೀಡಬಹುದಾಗಿದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಈ ದಿಸೆಯಲ್ಲಿ ಸೂಚನೆಯನ್ನು ನೀಡಿರುತ್ತಾರೆ. ಆದುದರಿಂದ, ಸದರಿ ಸೂಚನೆಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ವಿಷಯವನ್ನು ಪ್ರಸ್ತಾಪಿಸಬಹುದಾಗಿರುತ್ತದೆ. ಈಗ ನೀಡಿರುವ ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲವೆಂದು ಸರ್ಕಾರದ ವತಿಯಿಂದ ಈಗಾಗಲೇ ಸಭಾನಾಯಕರು ಗಮನಕ್ಕೆ ತಂದಿರುತ್ತಾರೆ.

ಆದುದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿರುವ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಚರ್ಚಿಸಲು ಅವಕಾಶವನ್ನು ನಿರಾಕರಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:– ಈಗ ಸದನವನ್ನು ಮಧ್ಯಾಹ್ನ 3–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2–06 ಗಂಟೆಗೆ ಮುಂದೂಡಿ ಪುನ: ಮಧ್ಯಾಹ್ನ 3–00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 42 ನಿಮಿಷಕ್ಕೆ ಪ್ರಾರಂಭವಾದಾಗ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)